## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 149/2022**
**ಸಿ.ಡಬ್ಲ್ಯೂಃ 14, ಪಿ.ಡಬ್ಲ್ಯೂಃ 11**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಹೇರಂಭ ವೆಂಕಟಯ್ಯ ನಾಯ್ಕ |
| **ತಂದೆಯ ಹೆಸರು** | : | ವೆಂಕಟಯ್ಯ ನಾಯ್ಕ |
| **ವಯಸ್ಸು** | : | 40 ವರ್ಷ |
| **ಉದ್ಯೋಗ** | : | ರೈಲ್ವೇ ಪೋಲಿಸ್, ಹುಬ್ಬಳ್ಳಿ |
| **ವಾಸ** | : | ಹುಬ್ಬಳ್ಳಿ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 05-12-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ನಾನು ಸನ್ 2017 ರಿಂದ 2022 ರವರೆಗೆ ಭಟ್ಕಳ ರೈಲ್ವೆ ಔಟ್ ಪೋಸ್ಟ್ ಪೋಲಿಸ್ ಠಾಣೆಯಲ್ಲಿ ಪೇದೆಯಾಗಿ ಕೆಲಸ ಮಾಡಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ.28-11-2019 ರಂದು ಚಾಸಾ-10 ರವರು ನನಗೆ ಫೋನು ಮಾಡಿ ಮುರ್ಡೇಶ್ವರದ ರೈಲಿನಲ್ಲಿ ಪ್ರಯಾಣಿಕರ ವಸ್ತು ಕಳ್ಳತನವಾಗಿದೆ ಎಂದು ಮಾಹಿತಿ ನೀಡಿದ್ದರು. ಅದಕ್ಕೆ ನಾನು, ಚಾಸಾ-10 ಮತ್ತು 15 ರವರು ಸೇರಿಕೊಂಡು ಕಳ್ಳತನ ಮಾಡಿದ ಆರೋಪಿಯನ್ನು ಮುರ್ಡೇಶ್ವರದ ರೈಲ್ವೇ ನಿಲ್ದಾಣದಲ್ಲಿ ಹುಡುಕಿದೆವು. ಆದರೆ ಅವನು ಸಿಗಲಿಲ್ಲ. ಸ್ಟೇಷನ್ ಮಾಸ್ಟರ್ ರವರು ಕಳ್ಳತನ ಮಾಡಿದ ವ್ಯಕ್ತಿಗಳು ಹೈವೇ ರಸ್ತೆಯ ಬದಿಗೆ ಹೋದರೆಂದು ತಿಳಿಸಿದರು. ಆಗ ನಾವು ಬಸ್ ನಿಲ್ದಾಣ ಮತ್ತು ಆಟೋ ನಿಲ್ದಾಣ ಮತ್ತು ಎಲ್ಲಾ ಕಡೆ ಹುಡುಕಿದೆವು. ಆದರೆ ಕಳ್ಳತನ ಮಾಡಿದ ವ್ಯಕ್ತಿಗಳು ಸಿಗಲಿಲ್ಲ. ಆಟೋ ನಿಲ್ದಾಣದ ಚಾಲಕರನ್ನು ವಿಚಾರಿಸಿದಾಗ ಕಳ್ಳತನ ಮಾಡಿದ ವ್ಯಕ್ತಿಗಳು ಮುರ್ಡೇಶ್ವರ ಬಸ್ ನಿಲ್ದಾಣಕ್ಕೆ ಹೋಗಿ ಅಲ್ಲಿ ಗೋವಾಕ್ಕೆ ಹೋಗಲು ಬಸ್ಸು ಸಿಗದೇ ಇರುವುದರಿಂದ ಅದೇ ಆಟೋದಲ್ಲಿ ಭಟ್ಕಳಕ್ಕೆ ಬಸ್ ನಿಲ್ದಾಣಕ್ಕೆ ಬಂದರೆಂದು ತಿಳಿಯಿತು. ನಾವು ಭಟ್ಕಳದ ಬಸ್ ನಿಲ್ದಾಣಕ್ಕೆ ಹೋಗಿ ಕಳ್ಳತನ ಮಾಡಿದ ಆರೋಪಿತರು ಹೋಗುತ್ತಿದ್ದ ಬಸ್ಸಿನ ಕಂಡಕ್ಟರ್ ನ ಮೊಬೈಲ್ ನಂಬರನ್ನು ಪಡೆದುಕೊಂಡು, ಸದರಿ ಬಸ್ಸಿನ ಕಂಡಕ್ಟರ್ ಗೆ ಫೋನು ಮಾಡಿ ವಿಚಾರಿಸಿದಾಗ

ಮೂರು ಜನರು ಹಿಂದಿ ಮಾತನಾಡುತ್ತಿರುವ ಹುಡುಗರು ಬಸ್ಸಿನ ಸೀಟು ನಂ.35 ರಿಂದ 37 ರಲ್ಲಿ ಕುಳಿತಿದ್ದಾರೆ ಎಂದು ತಿಳಿಸಿದ್ದರು. ಸದರಿ ವಿಚಾರವನ್ನು ನಾವು ಚಾಸಾ–10 ರವರಿಗೆ ತಿಳಿಸಿದೆವು. ತಕ್ಷಣ ಸದರಿ ವಿಚಾರವನ್ನು ಚಾಸಾ–12 ರವರಿಗೆ ತಿಳಿಸಿದೆವು. ನಂತರ ಸದರಿ ಆರೋಪಿತರನ್ನು ದಸ್ತಗಿರಿ ಮಾಡಿರುವುದಾಗಿ ವಿಚಾರ ತಿಳಿಯಿತು. ಅದೇ ರೀತಿ ಸದರಿಯವರು ಆರೋಪಿತರನ್ನು ದಸ್ತಗಿರಿ ಮಾಡಿ ಪಂಚನಾಮೆ ಮಾಡಿ ವಸ್ತುಗಳನ್ನು ವಶಪಡಿಸಿಕೊಂಡಿರುವುದಾಗಿ ವಿಚಾರ ತಿಳಿಯಿತು. ಮಾರನೇ ದಿನ ಆರೋಪಿತರನ್ನು ಮುರ್ಡೇಶ್ವರ ಠಾಣೆಗೆ ಕರೆತರಲಾಯಿತು. ಆಗ ಆರೋಪಿತರನ್ನು ನಾನು ನೋಡಿರುತ್ತೇನೆ. ಆರೋಪಿತರು ಭಟ್ಕಳದಿಂದ ಕಾರವಾರಕ್ಕೆ ಕೆಎ–31/ಎಫ್–1255 ನೇದರಲ್ಲಿ ಪ್ರಯಾಣಿಸುತ್ತಿದ್ದರು. ಸದರಿ ದಿನ ಚಾಸಾ–1 ರವರು ಟ್ರೈನ್ ನಂ.12619 ನೇದರಲ್ಲಿ ಮುಂಬಯಿಯಿಂದ ಉಡುಪಿಗೆ ಹೋಗುತ್ತಿದ್ದರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಿ.ಸಿ. ಮುಖಾಂತರ ಹಾಜರಾದ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ಮತ್ತು 3 ನೇ ಆರೋಪಿತರನ್ನು ಸ್ಪ್ಲಿಟ್–ಅಪ್ ಮಾಡಲಾಗಿದೆ. ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆಮಾಲುಗಳನ್ನು ಚಾಸಾ–1 ರವರ ಮಧ್ಯಂತರ ವಶಕ್ಕೆ ನೀಡಲಾಗಿದೆ. ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ಸದರಿ ದಿನ ನಾನು ರಾತ್ರಿ 10.00 ರಿಂದ ಬೆಳಿಗ್ಗೆ 6.00 ಗಂಟೆಯ ವರೆಗೆ ನನಗೆ ಕರ್ತವ್ಯಕ್ಕೆ ನೇಮಿಸಲಾಗಿತ್ತು. ನಾನು ಕರ್ತವ್ಯದಲ್ಲಿದ್ದ ಬಗ್ಗೆ ದಾಖಲೆ ನೀಡಿರುತ್ತೇನೆ. ಸದರಿ ದಿನ ನನಗೆ ಬೆಳಿಗ್ಗೆ 5.15 ಕ್ಕೆ ವಿಚಾರ ತಿಳಿಸಲಾಗಿತ್ತು. ಚಾಸಾ–10 ರವರಿಗೆ ಸ್ಟೇಷನ್ ಮಾಸ್ಟರ್ ಫೋನು ಮಾಡಿ ವಿಚಾರ ತಿಳಿಸಿದ್ದರು. ಆರೋಪಿತರನ್ನು ನಾವು ಸುಮಾರು ಒಂದೂವರೆ ಗಂಟೆಗಳ ಕಾಲ ಹುಡುಕಾಡಿರುತ್ತೇವೆ. ಬಸ್ಸಿನ ಕಂಡಕ್ಟರ್ ನ ಫೋನು ನಂಬರನ್ನು ಶಶಿಕಲಾ ಪಟಗಾರ್ ಎನ್ನುವವರಿಂದ ಪಡೆಯಲಾಗಿತ್ತು. ಅದನ್ನು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–10 ರಿಂದ 13 ಮತ್ತು 15 ನಮ್ಮ ಇಲಾಖಾ ಸಿಬ್ಬಂದಿಗಳು ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

Sd/-

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.**

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 149/2022**

**ಸಿ.ಡಬ್ಲ್ಯೂ 2, ಪಿ.ಡಬ್ಲ್ಯೂ 10**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಪರಶುರಾಮ ರಾಮಚಂದ್ರ ಮೊಗೇರ |
| **ತಂದೆಯ ಹೆಸರು** | : | ರಾಮಚಂದ್ರ ಮೊಗೇರ |
| **ವಯಸ್ಸು** | : | 43 ವರ್ಷ |
| **ಉದ್ಯೋಗ** | : | ಚಹಾ ಮಾರಾಟ |
| **ವಾಸ** | : | ಬೆಳಕೆ, ಭಟ್ಕಳ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 05-12-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿಗಳು ಇದೆ. ಅದು ಘಟನಾ ಸ್ಥಳದ ಪಂಚನಾಮೆ ಮತ್ತು ನಕ್ಷೆ ಇದ್ದು, ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಮತ್ತು 3(ಸಿ)ಎಂದು ಗುರುತಿಸಲಾಯಿತು. ನಿಪಿ-2 ಮತ್ತು 3 ಕ್ಕೆ ದಿ.28-11-2019 ರಂದು ಚಾಸಾ-1 ರವರಿಗೆ ಸೇರಿದ ವಸ್ತುಗಳ ಕಳ್ಳತನವಾದ ವಿಚಾರವಾಗಿ ಪಂಚನಾಮೆ ಮಾಡುವಾಗ ಸಹಿ ಮಾಡಿರುತ್ತೇನೆ. ಪೋಲಿಸರ ಸ್ಥಳವನ್ನು ಪರಿಶೀಲಿಸಿ ಫೋಟೊ ತೆಗೆದಿರುತ್ತಾರೆ. ಸದರಿ ಫೊಟೋವನ್ನು ನೋಡುತ್ತಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು ಸಾಯಂಕಾಲ 4.00 ರಿಂದ 5.00 ರವೆರಗೆ ಮಾಡಲಾಗಿದೆ. ಪಂಚನಾಮೆ ಮಾಡುವಾಗ ಚಾಸಾ-1 ಮತ್ತು ಪೋಲಿಸರು ಇದ್ದರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ನನ್ನ ಊರು ಬೆಳಕೆಯಾಗಿರುತ್ತದೆ. ಸದರಿ ದಿನ ನಾನು ರೈಲ್ವೇ ನಿಲ್ದಾಣದಲ್ಲಿ ಚಹಾ ಮಾರುತ್ತಿದ್ದೆನು. ನನಗೆ ಯಾರೂ ಕರೆದಿರಲಿಲ್ಲ. ಪಂಚನಾಮೆ ಬರೆಯಲು ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ಪಂಚನಾಮೆ ಬರೆದಿರುವುದಕ್ಕೆ ಸಹಿ ಮಾತ್ರ ಹಾಕಿರುತ್ತೇನೆ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸರಿ. ಸದರಿ ದಿನ ಪಂಚನಾಗಿ ನಾನು ಒಬ್ಬನೇ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪಂಚನಾಮೆಯನ್ನು ಸ್ಥಳದಲ್ಲಿಯೇ ಬರೆದಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.